**ಶ್ರೀ ಭಗವಾನ್ ಮಹಾವೀರ್ ಜೈನ್ ಸಂಜೆ ಕಾಲೇಜು, ವಿ.ವಿ.ಪುರಂ, ಬೆಂಗಳೂರು-04**

**ಬಿ.ಕಾಂ ಮೊದಲನೇ ಸೆಮಿಸ್ಟರ್ – ಮಾದರಿ ಪ್ರಶ್ನೆ ಪತ್ರಿಕೆ ಅಕ್ಟೋಬರ್- 2018**

**ಸಮಯ : 03 ಗಂಟೆಗಳು ವಿಷಯ:- ಪ್ರಥಮ ಭಾಷೆ ಕನ್ನಡ ಅಂಕಗಳು -70**

---

**I. (ಅ) ಕೆಳಗಿನ ಪದ್ಯದ ಭಾವಾರ್ಥವನ್ನು ಬರೆಯಿರಿ:** 6X1=6

1. ಕರುನಂದನರಂ ಕೊಂದೆಂ
ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂ
ಣ್ದೆರಡಂ ತೀರ್ಚಿದೆನಿರ್ದಪು
ವೆರಡುಮವಂ ತೀರ್ಚಿ ತೀರ್ಚದಿರ್ಪೆನೆ ಪಗೆಯಂ

**(ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** 2X2=4

1. ರನ್ನ 2. ಸತ್ಯಕ್ಕ 3. ಡಾ. ಚಂದ್ರಶೇಖರ ಕಂಬಾರ 4. ಜನಪದ ಮಹಾಕಾವ್ಯ

**(ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ:** 10X1=10

1. ದ್ರೌಪದಿ ಶತ್ರು ದುರ್ಯೋಧನನ್ನು ನಾಶಗೈಯ್ಯಲು ಭೀಮನನ್ನು ಉದ್ದೀಪಿಸಿದ ರೀತಿಯನ್ನು ವರ್ಣಿಸಿ

2.ದೇವರು ಮತ್ತು ಪೂಜಾರಿ ಮೌಢ್ಯ ಮತ್ತು ವೈಚಾರಿಕತೆಗಳ ಸಂಘರ್ಷವನ್ನು ಹೇಗೆ ನಿರೂಪಿಸುತ್ತದೆ?ವಿವರಿಸಿ

**2 . ಅ) ಎರಡು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ:** 5X2=10

1. ದೇವಿ ಬರ್ಮಾಚಾರಿಯನ್ನು ಸೆಳೆಯಲು ಮಾಡಿದ ಪ್ರಯತ್ನಗಳೇನು?
2. ರೊಟ್ಟಿ ಕಿತ್ತುಕೊಂಡ ಪ್ರಸಂಗವನ್ನು ವರ್ಣಿಸಿ.
3. ಸಾಹುಕಾರ್ ದೇವೀರಯ್ಯನವರ ವ್ಯಕ್ತಿತ್ವವನ್ನು ಪರಿಚಯಿಸಿ.

**ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ:** 10X1=10

1. ರೊಟ್ಟಿ ಕತೆಯಲ್ಲಿ ಮೂಡಿ ಬಂದಿರುವ ಹಸಿವಿನ ತೀವ್ರತೆಯನ್ನು ಕುರಿತು ಬರೆಯಿರಿ

2. ಜೀತ ಪದ್ಧತಿಯ ಕರಾಳ ಮುಖವನ್ನು ಕತೆಯ ಹಿನ್ನಲೆಯಲ್ಲಿ ವಿವರಿಸಿ.

**3. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ:** 5X1=05

1. ಕಿರಿಯ ರಾಣಿಯ ಮಾತು ಕೇಳಿ ದೊರೆ ಯಾವ ತೀರ್ಮಾನಗಳನ್ನು ಕೈಗೊಂಡನು ವಿಶ್ಲೇಷಿಸಿ.

2. ಕಿಳ್ಳೆಕ್ಯಾತರು ಯಾರು? ತೊಗಲುಗೊಂಬೆ ಆಟದಲ್ಲಿ ಅವರ ಪಾತ್ರವನ್ನು ವಿಶ್ಲೇಷಿಸಿ.

**ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ:** 10X1=10

1. ಸ್ತ್ರೀ ವ್ಯಾಮೋಹಿ ರಾಜನಿಂದ ಅಮಾಯಕರು ಕಷ್ಟಕ್ಕೆ ಸಿಲುಕಿದ ಬಗೆಯನ್ನು ವಿವರಿಸಿ

2. 'ಮನರಂಜನೆಗಷ್ಟೇ ಸೀಮಿತಗೊಳ್ಳದ ತೊಗಲುಗೊಂಬೆ ಆಟ ಕನ್ನಡ ಸಂಸ್ಕೃತಿಯಲ್ಲೂ ಬೇರೂರಿದೆ' ಹೇಗೆ ವಿವರಿಸಿ.

**4. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ:** 5X1=05

1. ಪ್ರಾಚೀನ ಕಾಲದ ಗ್ರಂಥ ಪ್ರಸಾರದ ಸ್ವರೂಪ ಹೇಗಿತ್ತು ?

2. ಅಂಕಣ ಸಾಹಿತ್ಯಕ್ಕೆ ಹಾ.ಮಾ.ನಾಯಕರ ಕೊಡುಗೆಗಳೇನು ?

**ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ:** 10X1=10

1. ಸಮಾಜ ಮತ್ತು ಬೆಳವಣಿಗೆಯ ದೃಷ್ಟಿಯಿಂದ " ಪಠ್ಯ ಪುಸ್ತಕದ " ಮಹತ್ವವೇನು ವಿವರಿಸಿ.

2. ವ್ಯಾಪಾರಂ ದ್ರವ್ಯ ಚಿಂತನಂ ಇದ್ದದ್ದು 'ವ್ಯಾಪಾರಂ ದ್ರೋಹ ಚಿಂತನಂ' ಆದ ಬಗೆ ಮತ್ತು ಅದರ ಪರಿಣಾಮಗಳನ್ನು ವಿವರಿಸಿ

***************